ಕರ್ನಾಟಕ ಸರ್ಕಾರ

**ಆಡಳಿತ ತರಬೇತಿ ಸಂಸ್ಥೆ**

ಲಲಿತ ಮಹಲ್ ರಸ್ತೆ, ಮೈಸೂರು – 570 011

ದೂರವಾಣಿ:0821-2443264, 2443839, 2522142, ಫ್ಯಾಕ್ಸ್: 2523899, 2520123 & 2520084

ಇ-ಮೈಲ್: dgatimysore@gmail.com or dg-ati-kamy@nic.in, Web: http://www.atimysore.gov.in

ಸಂಖ್ಯೆ: ತರಬೇತಿ/ವಿವ.64/2014-15 ದಿನಾಂಕ: 14/07/2014

# ಸುತ್ತೋಲೆ

ವಿಷಯ: ತರಬೇತಿ ಕಾರ್ಯಕ್ರಮಗಳಲ್ಲಿ ಉಪನ್ಯಾಸ ನೀಡಲು ಹಾಜರಾಗುವ ಅತಿಥಿ ಉಪನ್ಯಾಸಕರುಗಳಿಗೆ ಗೌರವಧನವನ್ನು ಬ್ಯಾಂಕ್ ಮೂಲಕ ಪಾವತಿಸುವ ಕುರಿತು.

ಆಡಳಿತ ತರಬೇತಿ ಸಂಸ್ಥೆ, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣಾಭಿವೃದ್ಧಿ ಸಂಸ್ಥೆ ಮತ್ತು ರಾಜ್ಯ ನಗರಾಭಿವೃದ್ಧಿ ಸಂಸ್ಥೆಗಳಲ್ಲಿ ನಡೆಸಲಾಗುವ ತರಬೇತಿ ಕಾರ್ಯಕ್ರಮಗಳಿಗೆ ಉಪನ್ಯಾಸ ನೀಡಲು ಹಾಜರಾಗುವ ಅತಿಥಿ ಉಪನ್ಯಾಸಕರುಗಳಿಗೆ ಗೌರವ ಧನವನ್ನು ಹಣ ನೀಡಿ, ರಶೀತಿ ಪಡೆಯುವ ಮೂಲಕ ನೇರವಾಗಿ ಪಾವತಿಸಲಾಗುತ್ತಿದೆ. ಈ ಸಂಬಂಧ, ದಿನಾಂಕ: 09/07/2014ರಂದು ಹಾಗೂ 11/07/2014ರಂದು ನಡೆದ ಬೋಧಕರ ಸಭೆಯಲ್ಲಿ ಗೌರವ ಧನ ಬಾಬ್ತು ಹಣವನ್ನು ಮುಂಗಡವಾಗಿ ಸಮನ್ವಯಾಧಿಕಾರಿಗಳಿಗೆ ನೀಡುವ ಪದ್ಧತಿಯನ್ನು ಸರಳೀಕರಣಗೊಳಿಸಬೇಕೆಂಬ ಅಭಿಪ್ರಾಯ ವ್ಯಕ್ತವಾಗಿರುತ್ತದೆ. ಹಾಗೂ ಸಾದಿಲ್ವಾರು ವೆಚ್ಚದ ಕೈಪಿಡಿ ನಿಯಮ 17ರ ಪ್ರಕಾರ ಸರ್ಕಾರದ ಹಣವನ್ನು ಉಪಯೋಗಕ್ಕೆ ತಕ್ಷಣ ಬಾರದಿದ್ದಲ್ಲಿ ಮುಂಗಡವಾಗಿ ನೀಡಬಾರದೆಂದು ತಿಳಿಸಲಾಗಿರುತ್ತದೆ. ಈ ಪಾವತಿ ವ್ಯವಸ್ಥೆಯಲ್ಲಿ ಪಾರದರ್ಶಕತೆಯನ್ನು ಅಳವಡಿಸಿಕೊಳ್ಳಲು ಮತ್ತು ಲೆಕ್ಕಪತ್ರಗಳ ವ್ಯವಹಾರವನ್ನು ಆಧುನೀಕರಣಗೊಳಿಸಲು ತೀರ್ಮಾನಿಸಲಾಗಿರುತ್ತದೆ.

ಈ ಹಿನ್ನೆಲೆಯಲ್ಲಿ, ಇನ್ನು ಮುಂದೆ ಮೂರು ಸಂಸ್ಥೆಗಳಲ್ಲಿ ಆಯೋಜಿಸಲಾಗುವ ತರಬೇತಿ ಕಾರ್ಯಕ್ರಮಗಳಿಗೆ ಅತಿಥಿ ಉಪನ್ಯಾಸ ನೀಡಲು ಆಗಮಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ನೀಡಲಾಗುವ ಗೌರವಧ ಮತ್ತು ಪ್ರಯಾಣಭತ್ಯೆಯನ್ನು ನಗದು ರೂಪದಲ್ಲಿ ಪಾವತಿಸುವ ಬದಲಾಗಿ; ಅವರ ಬ್ಯಾಂಕ್ ಖಾತೆಯ ವೈಯಕ್ತಿಕ ವಿವರಗಳನ್ನು ಪಡೆದು, ಎನ್.ಇ.ಎಫ್.ಟಿ (National Electronic Fund Transfer) ಪದ್ಧತಿ ಮೂಲಕ ಪಾವತಿ ಮಾಡಲು ಆದೇಶಿಸಿದೆ.

ಸಂಪನ್ಮೂಲ ವ್ಯಕ್ತಿಗಳಿಂದ ಪಡೆದ ಪ್ರಯಾಣ ಭತ್ಯೆ ಕ್ಲೇಮಿಗೆ ಪೂರಕವಾಗಿ ರೈಲು/ಬಸ್ಸು/ವಿಮಾನ ಟಿಕೆಟ್‌ಗಳನ್ನು ಲಗತ್ತಿಸುವುದು. ಕಾರು/ಟ್ಯಾಕ್ಸಿಯಲ್ಲಿ ಪ್ರಯಾಣಿಸಿದಾಗ ವಾಹನದ ನೋಂದಣಿ ಸಂಖ್ಯೆಯನ್ನು ದಾಖಲಿಸುವುದು.

ಅತಿಥಿ ಉಪನ್ಯಾಸಕರಿಗೆ ಪಾವತಿಸುವ ಗೌರವಧನವನ್ನು ವರ್ಗಾಯಿಸುವಲ್ಲಿ ವಿಳಂಬವಾಗದಂತೆ, ಸಂಬಂಧಿಸಿದ ತರಬೇತಿ ಸಂಯೋಜಕರು, ನಗದು ಶಾಖೆ ಹಾಗೂ ಲೆಕ್ಕಾಧೀಕ್ಷಕರು ಜರೂರು ಕ್ರಮ ವಹಿಸುವುದು. ಲೆಕ್ಕ ಪತ್ರಗಳನ್ನು ಸರ್ಕಾರದ ಸುತ್ತೋಲೆಗಳು ಹಾಗೂ ನಿಯಮಾನುಸಾರ ಕ್ರಮವಹಿಸುವುದು.

ಎನ್.ಇ.ಎಫ್.ಟಿ (National Electronic Fund Transfer) ಪದ್ಧತಿ ಮೂಲಕ ಮೂರು ಸಂಸ್ಥೆಗಳಲ್ಲಿ ಅತಿಥಿ ಉಪನ್ಯಾಸಕರುಗಳಾಗಿ ಆಗಮಿಸುವ ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನವನ್ನು ಪಾವತಿಮಾಡುವ ಸಂದರ್ಭದಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧ-1, ಅನುಬಂಧ-2 ಮತ್ತು ಅನುಬಂಧ-3ರ ರೀತ್ಯಾ ಕ್ರಮ ವಹಿಸಲು ಸೂಚಿಸಿದೆ.

ಈ ಆದೇಶವು ದಿನಾಂಕ: 14/07/2014 (ಸೋಮವಾರ)ದಿಂದ ಜಾರಿಗೆ ಬಂದಿರುತ್ತದೆ.

ಮಹಾ ನಿರ್ದೇಶಕರು
**ಆಡಳಿತ ತರಬೇತಿ ಸಂಸ್ಥೆ, ಮೈಸೂರು.**

ಪ್ರತಿಯನ್ನು:

1. ಮಹಾ ನಿರ್ದೇಶಕರ ಆಪ್ತ ಶಾಖೆಗೆ.
2. ಜಂಟಿ ನಿರ್ದೇಶಕರು(ಆಡಳಿತ)/(ತರಬೇತಿ), ಆಡಳಿತ ತರಬೇತಿ ಸಂಸ್ಥೆ, ಮೈಸೂರು
3. ನಿರ್ದೇಶಕರು, ಅಬ್ದುಲ್ ನಜೀರ್ ಸಾಬ್ ರಾಜ್ಯ ಗ್ರಾಮೀಣ ಅಭಿವೃದ್ಧಿ ಸಂಸ್ಥೆ, ಮೈಸೂರು.
4. ನಿರ್ದೇಶಕರು, ರಾಜ್ಯ ನಗರಾಭಿವೃದ್ಧಿ ಸಂಸ್ಥೆ, ಮೈಸೂರು.
5. ಮೂರು ಸಂಸ್ಥೆಯ ಎಲ್ಲಾ ಬೋಧಕರು/ಸಲಹೆಗಾರರ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ.

ಪು.ತಿ.ನೋ.)

6. ಉಪ ನಿರ್ದೇಶಕರು (ಆಡಳಿತ ಮತ್ತು ಶಿಷ್ಟಾಚಾರ), ಆ.ತ.ಸಂ/ರಾಗ್ರಾಸಂ/ರಾನಸಂ ರವರ ಮಾಹಿತಿಗಾಗಿ.
7. ಮೂರು ಸಂಸ್ಥೆಗಳ ಪತ್ರಾಂಕಿತ ವ್ಯವಸ್ಥಾಪಕರು/ಅಧೀಕ್ಷಕರು(ಆಡಳಿತ) ಮತ್ತು ಅಧೀಕ್ಷಕರು(ಲೆಕ್ಕ)
8. ತರಬೇತಿ ಶಾಖೆ/ಎಲ್ಲಾ ತರಬೇತಿ ಸಹಾಯಕರುಗಳಿಗೆ/ಲೆಕ್ಕ(1), ಲೆಕ್ಕ(3) ಮತ್ತು ಲೆಕ್ಕ(5) ಶಾಖೆಗಳಿಗೆ ಮಾಹಿತಿಗಾಗಿ
9. ಕಚೇರಿ ಪ್ರತಿ.

# ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ/ಪ್ರಯಾಣ ಭತ್ಯೆ ಪಾವತಿಸುವ ಪದ್ಧತಿ

1. **ತರಬೇತಿ ಸಮನ್ವಯಾಧಿಕಾರಿ**

ತರಬೇತಿ ಕಾರ್ಯಕ್ರಮಗಳಿಗೆ ಸಂಪನ್ಮೂಲ ವ್ಯಕ್ತಿಗಳನ್ನು ಆಹ್ವಾನಿಸುವ ಸಂಧರ್ಭದಲ್ಲಿ ಅವರ ಬ್ಯಾಂಕ್/ಶಾಖೆ ಹೆಸರು, ಎಸ್.ಬಿ.ಅಕೌಂಟ್ ನಂಬರ್, ಶಾಖೆ ಕೋಡ್, ಐ.ಎಫ್.ಎಸ್.ಸಿ. ಕೋಡ್ ಮತ್ತು ಎಂ.ಐ.ಸಿ.ಆರ್. ಕೋಡ್ ನಂಬರ್ ಪಡೆಯಬೇಕು. ತರಬೇತಿ ದಿನಾಂಕದಂದು, ಸಂಪನ್ಮೂಲ ವ್ಯಕ್ತಿಗಳನ್ನು ತರಗತಿಗೆ ಪರಿಚಯ ಮಾಡಿಕೊಡುವ ಪೂರ್ವಬಾವಿಯಾಗಿ ಮೇಲ್ಕಂಡ ವಿವರಗಳನ್ನು ಗೊತ್ತುಪಡಿಸಿದ ನಮೂನೆ (ಅನುಬಂಧ-2) ರಲ್ಲಿ ಪಡೆದುಕೊಳ್ಳಬೇಕು. ತರಗತಿ ಮುಗಿದ ನಂತರ (ಅನುಬಂಧ-2) ರಲ್ಲಿರುವ 'ಹಣ ಸಂದಾಯ ರಶೀತಿ'(Pre-Receipt) ಯಲ್ಲಿ ಸಹಿಯನ್ನು ಪಡೆದುಕೊಳ್ಳಬೇಕು. ನಂತರ ಈ ದಾಖಲೆಗಳನ್ನು ವಹಿಯಲ್ಲಿ (ಅನುಬಂಧ-3) ನಮೂದಿಸಿ ಕೂಡಲೇ ಲೆಕ್ಕಾಧೀಕ್ಷಕರಿಗೆ ಸಲ್ಲಿಸಿ ವಹಿಯಲ್ಲಿ ಸ್ವೀಕೃತಿ ಪಡೆಯುವುದು.

2. **ಲೆಕ್ಕಾಧೀಕ್ಷಕರು**

ತರಬೇತಿ ಸಮನ್ವಯಾಧಿಕಾರಿಗಳಿಂದ ಹಣ ಸಂದಾಯ ರಶೀದಿಗಳನ್ನು ಪಡೆದುಕೊಂಡು, ಆಯಾ ತರಬೇತಿ ಕಾರ್ಯಕ್ರಮಗಳಿಗೆ **ಪ್ರತ್ಯೇಕ ಕಡತವನ್ನು ನಿರ್ವಹಿಸಿ,** ಪರಿಶೀಲಿಸಿ ಪತ್ರಾಂಕಿತ ವ್ಯವಸ್ಥಾಪಕರಿಗೆ ಮುಂದಿನ ಕ್ರಮಕ್ಕೆ ಸಲ್ಲಿಸುವುದು. ಉಪ ನಿರ್ದೇಶಕರಿಂದ (ಆಡಳಿತ ಮತ್ತು ಶಿಷ್ಟಚಾರ) ಪಾಸು ಮಾಡಲ್ಪಟ್ಟ ಆಯಾ ದಿನದ ವಿವಿಧ ತರಬೇತಿಗಳ ಹಣ ಸಂದಾಯ ರಶೀದಿಗಳನ್ನು ಕ್ರೋಢೀಕರಿಸಿ ತಃಖ್ತೆ ತಯಾರಿಸಿ, ಮುಂದಿನ ಕ್ರಮಕ್ಕಾಗಿ ನಗದು ಗುಮಾಸ್ತರಿಗೆ ಅದೇ ದಿನ ನೀಡುವುದು.

3. **ಪತ್ರಾಂಕಿತ ವ್ಯವಸ್ಥಾಪಕರು**

ಪತ್ರಾಂಕಿತ ವ್ಯವಸ್ಥಾಪಕರು ಪರಿಶೀಲಿಸಿ ಉಪ ನಿರ್ದೇಶಕರು (ಆಡಳಿತ ಮತ್ತು ಶಿಷ್ಟಾಚಾರ) ಇವರಿಗೆ ಹಣ ಸಂದಾಯ ರಶೀದಿಯನ್ನು ಪಾಸು ಮಾಡಲು (Pass Order) ಕೂಡಲೇ ಸಲ್ಲಿಸುವುದು.

4. **ಉಪ ನಿರ್ದೇಶಕರು (ಆಡಳಿತ ಮತ್ತು ಶಿಷ್ಟಾಚಾರ)**

ಹಣ ಸಂದಾಯ ರಶೀದಿಯನ್ನು ಕೂಡಲೇ ಪಾಸು ಮಾಡಿ, ಅದನ್ನು ಲೆಕ್ಕ ಅಧೀಕ್ಷಕರಿಗೆ ತಕ್ಷಣ ಹಿಂತಿರುಗಿಸುವುದು.

5. **ನಗದು ಗುಮಾಸ್ತರು**

ಲೆಕ್ಕ ಅಧೀಕ್ಷಕರಿಂದ ತರಬೇತಿ ಕಾರ್ಯಕ್ರಮಗಳ ಕ್ರೋಢೀಕೃತ ಪಟ್ಟಿಯನ್ನು ಪಡೆದ ನಂತರ ಚೆಕ್ಕ ಬರೆದು ಉಪ ನಿರ್ದೇಶಕರ (ಆಡಳಿತ ಮತ್ತು ಶಿಷ್ಟಾಚಾರ) ಸಹಿಯನ್ನು ಪಡೆದು ಬ್ಯಾಂಕ್ ಮೂಲಕ ಸಂಬಂಧಿಸಿದ ಸಂಪನ್ಮೂಲ ವ್ಯಕ್ತಿಗಳಿಗೆ ಮರುಕೆಲಸದ ದಿನ (working day) ಎನ್.ಇ.ಎಫ್.ಟಿ (National Electronic Fund Transfer) ಪದ್ದತಿ ಮುಖಾಂತರ ಜಮೆ ಮಾಡಿ ಬ್ಯಾಂಕಿನಿಂದ ಸ್ವೀಕೃತಿಯನ್ನು ಪಡೆಯ ಬೇಕು. ಸಂಬಂಧಿಸಿದ ಕಡತದಲ್ಲಿ ಹಣ ಸಂದಾಯ ರಶೀದಿ, ಬ್ಯಾಂಕ್ ಸ್ವೀಕೃತಿಯನ್ನು ಆಡಿಟ್ ಸಲುವಾಗಿ ಸಂರಕ್ಷಿಸಬೇಕು.

-000-

ಅನುಬಂಧ-2

## ಸಂಪನ್ಮೂಲ ವ್ಯಕ್ತಿಗಳಿಗೆ ಗೌರವಧನ/ಪ್ರಯಾಣ ಭತ್ಯೆ ಕುರಿತಾದ ಮುಂಗಡ ಹಣಸಂದಾಯ ರಶೀತಿ

| ಕ್ರಮ ಸಂಖ್ಯೆ | ವಿವರ | | |
|---|---|---|---|
| 1. | ತರಬೇತಿಯ ಹೆಸರು | | |
| 2. | ಸಮನ್ವಯಾಧಿಕಾರಿಯ ಹೆಸರು | | |
| 3. | ತರಬೇತಿ ಅವಧಿ | ಯಿಂದ: | ವರೆಗೆ: |
| 4. | ನಿಧಿಯ ಸ್ವರೂಪ | | |
| 5. | ಸಂಪನ್ಮೂಲ ವ್ಯಕ್ತಿಗಳ ಹೆಸರು | | |
| 6. | ದಿನಾಂಕ ಮತ್ತು ಸಮಯ | | |
| 7. | ಅಧಿವೇಶನಗಳ ಸಂಖ್ಯೆ | | |
| 8. | ಗೌರವ ಧನ ಮೊಬಲಗು | | |
| 9. | ಪ್ರಯಾಣ ಭತ್ಯೆ ಮೊಬಲಗು | | |
| 10. | ಒಟ್ಟು ಮೊಬಲಗು | | |
| 11. | ಬ್ಯಾಂಕು/ಶಾಖೆಯ ಹೆಸರು | | |
| 12. | ಎಸ್.ಬಿ. ಅಕೌಂಟ್ ಸಂಖ್ಯೆ | | |
| 13. | ಬ್ಯಾಂಕ್/ಶಾಖೆ ಕೋಡ್ ನಂಬರ್ | | |
| 14. | ಐ.ಎಫ್.ಎಸ್.ಸಿ. ಕೋಡ್ | | |
| 15. | ಎಂ.ಐ.ಸಿ.ಆರ್. ಕೋಡ್ | | |

ಮಹಾ ನಿರ್ದೇಶಕರು, ಆಡಳಿತ ತರಬೇತಿ ಸಂಸ್ಥೆ, ಮೈಸೂರು ಇವರಿಂದ ರೂ. (ರೂಪಾಯಿ . . . . . . . . . . . . . . . . . . . . . . . . . . . . . . . . . . . . . . . . . . . . . . . . ) ಮಾತ್ರ ಗೌರವಧನ/ಪ್ರಯಾಣ ಭತ್ಯೆ ಬಾಬ್ತು ಸ್ವೀಕರಿಸಿರುತ್ತೇನೆ.

ಸ್ಥಳ:
ದಿನಾಂಕ:

ಸಂಪನ್ಮೂಲ ವ್ಯಕ್ತಿಗಳ ಸಹಿ

ತರಬೇತಿ ಸಮನ್ವಯಾಧಿಕಾರಿಗಳ ಸಹಿ.

# ಸಂಪನ್ಮೂಲ ವ್ಯಕ್ತಿಗಳ ಗೌರವಧನ ಮತ್ತು ಪ್ರಯಾಣ ಭತ್ಯೆ ವಹಿ.

| ಕ್ರಮ ಸಂಖ್ಯೆ | ತರಬೇತಿಯ ಹೆಸರು | ಸಂಪನ್ಮೂಲ ವ್ಯಕ್ತಿಯ ಹೆಸರು | ರಶೀದಿ ದಿನಾಂಕ ಮತ್ತು ಮೊಬಲಗು | ಸಮನ್ವಯಾಧಿಕಾರಿಯ ಸಹಿ. | ಲೆಕ್ಕಾಧೀಕ್ಷಕರು ಸಹಿ | ಬ್ಯಾಂಕಿಗೆ ಜಮೆ ಮಾಡಿದ ದಿನಾಂಕ |
|---|---|---|---|---|---|---|
| 1. | | | | | | |
| 2. | | | | | | |
| 3. | | | | | | |
| 4. | | | | | | |
| 5. | | | | | | |
| 6. | | | | | | |
| 7. | | | | | | |
| 8. | | | | | | |
| 9. | | | | | | |
| 10. | | | | | | |
| 11. | | | | | | |
| 12. | | | | | | |
| 13. | | | | | | |
| 14. | | | | | | |
| 15. | | | | | | |
| 16. | | | | | | |
| 17. | | | | | | |
| 18. | | | | | | |
| 19. | | | | | | |
| 20. | | | | | | |
| 21. | | | | | | |
| 22. | | | | | | |
| 23. | | | | | | |
| 24. | | | | | | |
| 25. | | | | | | |
| 26. | | | | | | |
| 27. | | | | | | |
| 28. | | | | | | |
| 29. | | | | | | |
| 30. | | | | | | |
| 31. | | | | | | |
| 32. | | | | | | |
| 33. | | | | | | |
| 34. | | | | | | |
| 35. | | | | | | |
| 36. | | | | | | |
| 37. | | | | | | |
| 38. | | | | | | |
| 39. | | | | | | |
| 40. | | | | | | |
| 41. | | | | | | |